**ಓಎಸ್ ನಂಃ 21/2020**
**ಪಿಡಬ್ಲೂಃ2**

**<u>ಸಾಕ್ಷಿಗೆ ದಿನಾಂಕ 01-08-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>**

<u>ಪಾಟೀ ಸವಾಲುಃ 1ನೇ ಪ್ರತಿವಾದಿ ಪರ ಶ್ರೀ ಪಿ.ವ್ಹಿ.ಡಿ. ವಕೀಲರಿಂದ</u>

ಪ್ರತಿವಾದಿಯ ಗಂಡನಾದ ಶಿವಯೋಗಿಯ ಮನೆ ಚಿತ್ತಾಪೂರದಲ್ಲಿ ಇದೆಯಾ ಎಂದು ಕೇಳಿದಾಗ, ಸಾಕ್ಷಿ ಮನೆ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಶಿವಯೋಗಿಯ ಮನೆ ಯರಗಲ ಗ್ರಾಮದಲ್ಲಿ ಇತ್ತು ಎಂದು ನುಡಿಯುತ್ತಾರೆ. ನನ್ನ ಮನೆ ಯರಗಲ ನಲ್ಲಿ ಇಲ್ಲ. ನನ್ನ ಪ್ರಕಾರ ಶಿವಯೋಗಿಯ ಮನೆಯ ಅಕ್ಕ-ಪಕ್ಕದಲ್ಲಿ ಬೀರರಾಯ ಇಳಿಗೇರ ರವರ ಮನೆ, ಯಲ್ಲಮ್ಮನ ಗುಡಿ ಇದೆ.

ನಾನು ಶಿವಯೋಗಿಯನ್ನು ನೋಡಿರುತ್ತೇನೆ. ಆತ ಈಗ ಮೃತಪಟ್ಟಿರುತ್ತಾನೆ. ಸಾಕ್ಷಿಗೆ ಈಗ ಒಂದು ಭಾವಚಿತ್ರ ತೋರಿಸಲಾಗಿ ಸಾಕ್ಷಿಗೆ ಅದರಲ್ಲಿ ಶಿವಯೋಗಿ ಇದ್ದಾನಾ ಎಂದು ಕೇಳಿದಾಗ, ಸಾಕ್ಷಿ ಭಾವಚಿತ್ರದ ಎಡಭಾಗದಲ್ಲಿ ಬಿಳಿ ಶರ್ಟ ಹಾಕಿರುವ ವ್ಯಕ್ತಿ ಶಿವಯೋಗಿ ಎಂದು ನುಡಿದ ಕಾರಣ, ಸದರಿ ಭಾವಚಿತ್ರವನ್ನು ನಿಶಾನೆ ಡಿ-2 ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ಭಾವಚಿತ್ರ ತೋರಿಸಲಾಗಿ ಅದರಲ್ಲಿ ಯಾರು ಇದ್ದಾರೆ ಎಂದು ಕೇಳಿದಾಗ, ಸಾಕ್ಷಿ ಭಾವಚಿತ್ರದ ಕುಳಿತಿರುವ ವ್ಯಕ್ತಿಗಳ ಪೈಕಿ ಬಲಭಾಗದಲ್ಲಿ ಕುಳಿತ ಮಹಿಳೆಯು ಗೌರಮ್ಮ ಆಗಿದ್ದು ನಿಂತ ವ್ಯಕ್ತಿಗಳು ಅವರ ಮಕ್ಕಳು ಎಂದು ಗುರುತಿಸಿದ ಕಾರಣ, ಸದರಿ ಭಾವಚಿತ್ರವನ್ನು ನಿಶಾನೆ ಡಿ-3 ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಎರಡು ಭಾವಚಿತ್ರಗಳನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿ ಕಂಡು ಬರುವ ನೀಲಿ ಬಣ್ಣದ ಶರ್ಟ ಹಾಕಿದ ವ್ಯಕ್ತಿಯೇ ಶಿವಯೋಗಿ ಆಗಿದ್ದು, ಮಹಿಳೆ ಯಾರು ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಆದಕಾರಣ, ಸದರಿ ಭಾವಚಿತ್ರಗಳನ್ನು ನಿಶಾನೆ ಡಿ-4 ಮತ್ತು ಡಿ-5 ಎಂದು ಗುರುತಿಸಲಾಯಿತು. ಸದರಿ ಭಾವಚಿತ್ರಗಳಲ್ಲಿ ಶಿವಯೋಗಿಯೊಂದಿಗೆ 1ನೇ ಪ್ರತಿವಾದಿ ಇದ್ದಾರೆ ಎಂದರೆ ಸಾಕ್ಷಿ ನನಗೆ ಅವರನ್ನು ಗುರುತಿಸಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಈಗ ನಿಶಾನೆ ಡಿ-1ನ್ನು ತೋರಿಸಲಾಗಿ ಅದರಲ್ಲಿ ಗುರುತಿಸಲಾದ ನಿಶಾನೆ ಡಿ-1(ಎ) ಭಾವಚಿತ್ರ 1ನೇ ಪ್ರತಿವಾದಿಗೆ ಸೇರಿದ್ದು ಎಂದು ನುಡಿಯುತ್ತಾರೆ. ನೀವು ಈಗ ಗೌರಮ್ಮ ಅವರ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

(ಅಭಿಷೇಕ್ ರಾಮಚಂದ್ರ ಜೋಶಿ)
ಸಿವಿಲ್ ನ್ಯಾಯಾಧೀಶರು,ಚಿತ್ತಾಪೂರ.